# ಕರಿಗಿರಿಕ್ಷೇತ್ರ :

## ದೇವರಾಯನ ದುರ್ಗ ಶ್ರೀ ಲಕ್ಷ್ಮೀನರಸಿಂಹ ಕ್ಷೇತ್ರ

**ದೇವರಾಯನ ದುರ್ಗ ತುಮಕೂರಿನಿಂದ ಸುಮಾರು ೧೦-೧೨ ಕಿಲೋಮೀಟರ್ ದೂರದಲ್ಲಿದೆ. ಸುಮಾರು ೩೯೦೦ ಅಡಿ ಎತ್ತರದಲ್ಲಿದೆ.**

### ಬೇರೆ ಬೇರೆ ಯುಗಗಳಲ್ಲಿ ಬೇರೆ ಬೇರೆ ಹೆಸರುಗಳು-

| **ಯುಗ** | **ಕ್ಷೇತ್ರನಾಮ** |
|---|---|
| ಕೃತಯುಗ | ಉಕೇಲಾದ್ರಿ |
| ತ್ರೇತಾಯುಗ | ಸಿಂಹಾದ್ರಿ |
| ದ್ವಾಪರಯುಗ | ಸಿದ್ಧಗಿರಿ |
| ಕಲಿಯುಗ | ಕರಿಗಿರಿ |



**"ಕರಿಗಿರಿ" ಹೆಸರು ಬಂದ ಕಥೆ** - ಒಮ್ಮೆ ದೇವಲೋಕದಲ್ಲಿ ಗಂಧರ್ವ ಸಹೋದರರಾದ ದೇವದತ್ತ ಮತ್ತು ಧನಂಜಯರು ಗಾಯನ ಮಾಡುತ್ತಿದ್ದರು. ಸಭೆಯಲ್ಲಿ ಎಲ್ಲ ದೇವಾದಿ ದೇವತೆಗಳೂ ಕೇಳಿ ಆನಂದಿಸುತ್ತಿದ್ದರು. ಆಗ ಅಲ್ಲಿಗೆ ಬಂದ ಭೃಗು ಋಷಿಗಳು ಅವರ ಗಾಯನದ ವೈಖರಿಯನ್ನು ಇಷ್ಟಪಡಲಿಲ್ಲ. ಆಗ ಆ ಗಂಧರ್ವರು ಭೃಗುಋಷಿಗಳನ್ನು ಅವಮಾನಗೊಳಿಸಿದರು. ಕೋಪಗೊಂಡ ಭೃಗುಋಷಿಗಳು ಅವರಿಗೆ "ನೀವು ಭೂಲೋಕದಲ್ಲಿ ಬೆಟ್ಟವಾಗಿ"ರೆಂದು ಶಾಪವನ್ನಿತ್ತರು. ತಮ್ಮ ತಪ್ಪಿನ ಅರಿವಾದ ಆ ಗಂಧರ್ವರು ಭೃಗುಋಷಿಗಳನ್ನು ಕ್ಷಮಾ ಯಾಚಿಸಲು ಕರುಣಾಮಯಿಗಳಾದ ಭೃಗುಋಷಿಗಳು ಆ ಶಾಪವನ್ನು ಬದಲಾಯಿಸಿ ಒಬ್ಬನು ಆನೆಯಾಗಿಯೂ ಮತ್ತೊಬ್ಬನು ಬೆಟ್ಟವಾಗಿಯೂ ಹುಟ್ಟುವಂತೆ ಅನುಗ್ರಹಿಸಿದರು. ಆ ಗಂಧರ್ವರು ಉಳಿದ ಕ್ಷೇತ್ರವೇ ಕರಿಗಿರಿ ಕ್ಷೇತ್ರ. ಆದ್ದರಿಂದಲೇ ಈ ಕ್ಷೇತ್ರಕ್ಕೆ "ಕರಿಗಿರಿ" ಎಂಬ ಹೆಸರು ಬಂದಿದೆ ಎಂದು ಪ್ರತೀತಿ.

**ನಾಮದ ಚಿಲುಮೆ** - ಈ ಸ್ಥಳದಲ್ಲಿ ಶ್ರೀರಾಮಚಂದ್ರನು ವನವಾಸಕ್ಕೆ ಹೋಗಿದ್ದಾಗ ಕೆಲವು ದಿನ ಕಳೆದನಂತೆ. ಶ್ರೀರಾಮಚಂದ್ರನು ತಾನು ಕುಳಿತುಕೊಳ್ಳುತ್ತಿದ್ದ ಒಂದು ಬಂಡೆಯ ಮೇಲೆ ಬಾಣವನ್ನು ಪ್ರಯೋಗಿಸಿದಾಗ ಗಂಗಾ ನೀರು ಜಲಧಾರಾ ರೂಪದಲ್ಲಿ ಉಕ್ಕಿತಂತೆ. ಶ್ರೀರಾಮಚಂದ್ರನು ಆ ನೀರನ್ನು ಉಪಯೋಗಿಸಿ ತಿಲಕವನ್ನು ಇಟ್ಟನಂತೆ. ಆದ್ದರಿಂದಲೇ ಆ ಸ್ಥಳಕ್ಕೆ ನಾಮದಚಿಲುಮೆ ಎಂದು ಪ್ರತೀತಿ.



**ಯೋಗಾನರಸಿಂಹದೇವರು** - ಬ್ರಹ್ಮದೇವರು ಇಲ್ಲಿ ಹತ್ತು ಸಾವಿರ ವರ್ಷಗಳ ಕಾಲ ತಪಸ್ಸನ್ನು ಆಚರಿಸಿದರಂತೆ. ಮೇಲಿನ ಬೆಟ್ಟದಲ್ಲಿ ಬ್ರಹ್ಮದೇವರು ಪ್ರತಿಷ್ಟಾಪಿಸಿದ ಯೋಗಾನರಸಿಂಹ ದೇವರು, ಪುಷ್ಕರಿಣಿ, ಮತ್ತು ಗುಹಾಂತರ ಪುಷ್ಕರಿಣಿ ಇದೆ.

**ಭೋಗಾನರಸಿಂಹದೇವರು** – ಕೆಳಗಿನ ಬೆಟ್ಟದಲ್ಲಿ ಭೋಗಾನರಸಿಂಹದೇವರು ಮತ್ತು ಲಕ್ಷ್ಮೀದೇವಿಯರನ್ನು ಕಾಣಬಹುದು.





ಇದೇ ಕ್ಷೇತ್ರದಲ್ಲಿ ಪರಾಶರ ಮುನಿಗಳು ಸಂತಾನಪ್ರಾಪ್ತಿಗಾಗಿ ತಪಸ್ಸನ್ನಾಚರಿಸಿದರಂತೆ. ಪರಮಾತ್ಮನು ಸಂತುಷ್ಟನಾಗಿ ತಾನೇ ವೇದವ್ಯಾಸನಾಗಿ ಅವತರಿಸಿದನಂತೆ ಮಗನಾಗಿ.

ಇಲ್ಲಿನ ವಿಶೇಷವೆಂದರೆ ಪಂಚರಾತ್ರ ಮತ್ತು ತಂತ್ರಸಾರಾಗಮ ಎರಡೂ ವಿಧಾನದಲ್ಲಿ ಪೂಜೆ ನಡೆಯುತ್ತದೆ.

ಇಲ್ಲಿನ ಬ್ರಹ್ಮರಥೋತ್ಸವ ಸಮಯದಲ್ಲಿ (ಫಾಲ್ಗುಣಮಾಸ ಪುಬ್ಬ ನಕ್ಷತ್ರ, ಪೌರ್ಣಮಿಯಂದು) ಗರುಡನು ತಪ್ಪದೆ ಬಂದು ಪ್ರದಕ್ಷಿಣೆ ಬರುವನಂತೆ.

ಲಕ್ಷ್ಮೀದೇವಿ ಮತ್ತು ನರಸಿಂಹದೇವರನ್ನು ಪ್ರತ್ಯೇಕವಾಗಿ ದರ್ಶನ ಮಾಡಿದರೂ, ನಾವು ಅವರ ದರ್ಶನ ಸಮಯದಲ್ಲಿ ನರಸಿಂಹದೇವರೊಟ್ಟಿಗೆ ಲಕ್ಷ್ಮೀದೇವಿ ಸದಾ ನೆಲೆಸಿರುತ್ತಾಳೆ ಎಂದು ಅನುಸಂಧಾನ ಮಾಡಿ ದರ್ಶನ ಮಾಡಬೇಕೇ ಹೊರತು ಬೇರೆ ಬೇರೆ ಎಂದು ಭಾವಿಸಬಾರದು. ಲಕ್ಷ್ಮೀ ದೇವಿ ಸದಾ ಶ್ರೀನರಸಿಂಹನ ಜೊತೆಗೇ ಇರುತ್ತಾಳೆ.